ಪ್ರವಾದಿಯವರ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ನಡವಳಿಕೆ ಪವಿತ್ರ ಕುರ್ಆನ್ ಆಗಿದೆ

ಸಅದ್ ಬಿನ್ ಹಿಶಾಮ್ ಬಿನ್ ಆಮಿರ್ – ಆಯಿಶ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರವರ ಬಳಿಗೆ ಹೋದಾಗ ಹೇಳಿದರು: "ಓ ಸತ್ಯವಿಶ್ವಾಸಿಗಳ ತಾಯಿಯವರೇ! ಅಲ್ಲಾಹನ ಸಂದೇಶವಾಹಕರ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ನಡವಳಿಕೆಯ ಬಗ್ಗೆ ನನಗೆ ತಿಳಿಸಿಕೊಡಿ." ಅವರು ಕೇಳಿದರು: "ನೀವು ಪವಿತ್ರ ಕುರ್ಆನ್ ಪಠಿಸುವುದಿಲ್ಲವೇ?" ನಾನು ಹೇಳಿದೆ: "ಪಠಿಸುತ್ತೇನೆ." ಅವರು ಹೇಳಿದರು: "ಪ್ರವಾದಿಯವರ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ನಡವಳಿಕೆ ಪವಿತ್ರ ಕುರ್ಆನ್ ಆಗಿದೆ."
[صحيح] [رواه مسلم في جملة ٍ حديث طويل] ٍ

ಪ್ರವಾದಿಯವರ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ನಡವಳಿಕೆಯ ಬಗ್ಗೆ ಸತ್ಯವಿಶ್ವಾಸಿಗಳ ಮಾತೆ ಆಯಿಶ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರೊಡನೆ ಕೇಳಲಾದಾಗ ಅವರು ಒಂದು ಸಮಗ್ರ ವಾಕ್ಯದ ಮೂಲಕ ಉತ್ತರಿಸಿದರು. ಅವರು ಪ್ರಶ್ನೆ ಕೇಳಿದವನ ಗಮನವನ್ನು ಎಲ್ಲಾ ರೀತಿಯ ಸಂಪೂರ್ಣತೆಯ ನಡವಳಿಕೆಗಳನ್ನು ಒಳಗೊಂಡಿರುವ ಪವಿತ್ರ ಕುರ್ಆನ್ನ ಕಡೆಗೆ ತಿರುಗಿಸಿ ಹೇಳಿದರು: ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಪವಿತ್ರ ಕುರ್ಆನನ್ನು ತಮ್ಮ ನಡವಳಿಕೆಯಾಗಿ ಮಾಡಿಕೊಂಡಿದ್ದಾರೆ; ಅದು ಆಜ್ಞಾಪಿಸುವುದನ್ನು ಅವರು ನಿರ್ವಹಿಸುತ್ತಾರೆ ಮತ್ತು ಅದು ವಿರೋಧಿಸುವುದರಿಂದ ಅವರು ದೂರ ಸರಿಯುತ್ತಾರೆ. ಪವಿತ್ರ ಕುರ್ಆನ್ನಲ್ಲಿರುವ ಪ್ರಕಾರ ಕಾರ್ಯವೆಸಗುವುದು, ಅದು ನಿಲ್ಲಲು ಹೇಳಿದಲ್ಲಿ ನಿಲ್ಲುವುದು, ಅದು ತೋರಿಸಿದ ಶಿಷ್ಟಾಚಾರಗಳನ್ನು ಪಾಲಿಸುವುದು ಮತ್ತು ಅದರಲ್ಲಿರುವ ಉದಾಹರಣೆಗಳು ಮತ್ತು ಕಥೆಗಳಿಂದ ನೀತಿಪಾಠವನ್ನು ಕಲಿತುಕೊಳ್ಳುವುದು ಅವರ ನಡವಳಿಕೆಯಾಗಿದೆ.

https://sunnah.global/hadeeth/kn/show/8265